JETIR.ORG ISSN: 2349-5162 | ESTD Year : 2014 | Monthly Issue
JOURNAL OF EMERGING TECHNOLOGIES AND INNOVATIVE RESEARCH (JETIR)
An International Scholarly Open Access, Peer-reviewed, Refereed Journal

# ಶೈವ ಧರ್ಮದ ಬೆಳವಣಿಗೆಗೆ ಮಹಾಜನರು ನೀಡಿದ ದಾನ-ದತ್ತಿಗಳು

**ಡಾ.ಶಿವಾನಂದ ಆರ್.ನಾಗಣ್ಣವರ**

ಸಹಾಯಕ ಪ್ರಾಧ್ಯಾಪಕರು,

ವಿ.ಎಂ.ಎಸ್. ಆರ್. ವಸ್ತ್ರದ, ಕಲಾ, ವಿಜ್ಞಾನ

ಹಾಗೂ ವಿ.ಎಸ್ .ಬೆಳ್ಳಿಹಾಳ ವಾಣಿಜ್ಯ ಮಹಾವಿದ್ಯಾಲಯ, ಹುನಗುಂದ

**ಸಾರಾಂಶ :**

**[ಒಂದು ಧರ್ಮದ ಬೇರುಗಳು ಗಟ್ಟಿಯಾಗಿ ಧಾರ್ಮಿಕ ನೆಲೆಯಲ್ಲಿ ನಿಲ್ಲಬೇಕಾದರೆ ಅದಕ್ಕೆ ಮಾನವನು ದಾನವೆಂಬ ನೀರನ್ನೆರೆದು ಪೋಷಿಸಬೇಕು ಅಂದಾಗ ತಾವು ನಂಬಿದ ಧರ್ಮವು ಬೆಳವಣಿಗೆ ಹೊಂದಲು ಸಾಧ್ಯ. ನಾಡನ್ನಾಳುವ ಅರಸನೊಬ್ಬನೆ ಧರ್ಮದ ಬೆಳವಣಿಗೆಗೆ ಶ್ರಮಿಸಿದರೆ ಸಾಲದು ಪ್ರತಿಯೊಬ್ಬ ಪ್ರಜೆಯೂ ಶ್ರಮಿಸಿದಾಗ ಮಾತ್ರ ಅದು ಬೆಳವಣಿಗೆಯನ್ನು ಕಾಣುವುದರೊಂದಿಗೆ ಹೆಚ್ಚು ಹೆಚ್ಚಾಗಿ ಪ್ರಸಾರ ಹೊಂದಲೂ ಕಾರಣವಾಗಬಹುದು. ಇದಕ್ಕೆ ಮುಖ್ಯವಾಗಿ ಬೇಕಾಗಿರುವುದು ದಾನ ಧರ್ಮಾದಿ ಕಾರ್ಯಗಳು.**

**ಬ್ರಾಹ್ಮಣ್ಯವನ್ನು ಪಾಲಿಸುತ್ತಾ ಅಗ್ರಹಾರಗಳಲ್ಲಿ ಪಾಠ ಪ್ರವಚನಗಳನ್ನು, ಪೂಜಾರ್ಚನೆಗಳನ್ನು ಮಾಡುತ್ತಾ ವೈಷ್ಣವ ಧರ್ಮವನ್ನು ಬೆಳೆಸುವಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದ ಮಹಾಜನರು, ಹಿಂದೂ ಧರ್ಮದ ಮತ್ತೊಂದು ಶಾಖೆಯಾದ ಶೈವಧರ್ಮವನ್ನೂ ಸಹ ಬೆಳೆಸುವಲ್ಲಿ ಶ್ರಮಿಸುತ್ತಿದ್ದರು ಎಂಬುದನ್ನು ಕರ್ನಾಟಕದಲ್ಲಿ ದೊರೆತ 106 ಶಾಸನಗಳು ಪರಿಚಯಿಸಿವೆ. ಈ ಶಾಸನಗಳ ಮೂಲಕ ರಾಷ್ಟ್ರಕೂಟರ ಕಾಲದ 2, ಕಲ್ಯಾಣದ ಚಾಲುಕ್ಯರ 48, ಕಳಚೂರಿ ಅರಸರ 12, ಯಾದವರ ಕಾಲದ 07 ಹಾಗೂ ಹೊಯ್ಸಳರ ಕಾಲದ 33 ಶಾಸನಗಳಲ್ಲಿ ಮಹಾಜನರು ನೀಡಿದ ದಾನಗಳ ಕುರಿತಾಗಿ ತಿಳಿಸಿವೆ. ಅಲ್ಲದೇ ಅದರಲ್ಲಿ ಭೂಮಿ, ತೋಟ, ನಿವೇಶನ, ಹಣ, ತೆರಿಗೆ ಆದಾಯ, ಮನೆ ಮುಂತಾದ ರೀತಿಯ ವಸ್ತುಗಳನ್ನು ದಾನವಾಗಿ ನೀಡಿದ್ದನ್ನು ಕಾಣಬಹುದು. ಅಲ್ಲದೇ ಇಂತಹ ದಾನಗಳು ಸೂರ್ಯಗ್ರಹಣ, ಚಂದ್ರಗ್ರಹಣ, ಹುಣ್ಣಿವೆ, ಸಂಕ್ರಾಂತಿಯ ಸಂದರ್ಭದಲ್ಲಿ ನೀಡಲಾಗುತ್ತಿತ್ತು ಎಂತಲೂ ಪರಿಚಯ ಮಾಡಿಕೊಟ್ಟಿವೆ ಎಂಬುದನ್ನು ಕ್ರಿ.ಶ.757 ರಿಂದ 1336ರವರೆಗಿನ ಕರ್ನಾಟಕದ ಶಾಸನಗಳನ್ನು ಅನುಲಕ್ಷಿಸಿ ಪ್ರಸ್ತುತ ಲೇಖನವನ್ನು ಸಾದರಪಡಿಸಲಾಗಿದೆ. ]**

**ಪ್ರಸ್ತಾವನೆ :**

ಧರ್ಮವನ್ನು ನಾವು ರಕ್ಷಿಸಿದರೆ ಧರ್ಮ ನಮ್ಮನ್ನು ರಕ್ಷಿಸುತ್ತದೆ ಎಂಬ ಮಾತಿನಂತೆ ಪ್ರತಿಯೊಬ್ಬರೂ ಧರ್ಮದ ಪ್ರಗತಿಗಾಗಿ ಶ್ರಮಿಸಬೆಕು ಅದರ ಬೆಳವಣಿಗೆಗಾಗಿ ದಾನದತ್ತಿಗಳನ್ನು ನೀಡುವ ಗುಣಗಳನ್ನು ಬೆಳೆಸಿಕೊಳ್ಳಬೇಕು ಎಂಬ ಮಾತಿನ ಹಿನ್ನೆಲೆಯಲ್ಲಿ ಸರ್ವಜ್ಞನು ಹೇಳುವಂತೆ "ಈವಂಗೆ ದೇವಂಗೆ ಅವುಂತದಯ್ಯ ದೇವನು ಜಗಕೆ ಕೊಡುತಿಹನು ಕೈಯಾರೆ ಈವನೇ ದೇವ" ಎಂದು ದಾನವನ್ನು ದೇವರಿಗೆ ಹೋಲಿಸುತ್ತಾನೆ. ಲೌಖಿಕ ಸುಖವನ್ನು ಬಯಸುತ್ತಾ ಮಾನವನು ಒಂದೆಡೆಯಿಂದ ಮತ್ತೊಂದೆಡೆ ಪಾರಮಾರ್ಥಿಕ ಸ್ಥಿತಿಯನ್ನು ಹೊಂದಲು ಹವಣಿಸುತ್ತಾನೆ. ಭಾರತೀಯರು ಮೋಕ್ಷವನ್ನು ಹೊಂದಲು ಅವರು ಪುಣ್ಯ ಕಾರ್ಯಗಳನ್ನು ಮಾಡುವುದೇ ಅದಕ್ಕೆ ಮಾರ್ಗ. ಮನುಸ್ಮೃತಿಯ ಪ್ರಕಾರ "ತಪ ವರ ಕೃತಯುಗೇ ತ್ರೇತಾಯಗೇ ತ್ರೇತಾಯಾಂ ಜ್ಞಾನ ಮುಚ್ಯತೇ ॥ ದ್ವಾಪಾರೇ ಯಜ್ಞ ಮೇವಾಹುಃ ದಾನಮೇಕಂ ಕಲೌಯುಗೆ' ಅಂದರೆ ಕೃತಯುಗದಲ್ಲಿ ತಪಸ್ಸಿನಿಂದ ತ್ರೇತಾಯುಗದಲ್ಲಿ ಜ್ಞಾನದಿಂದ ದ್ವಾಪಾರ ಯುಗದಲ್ಲಿ ಯಜ್ಞವನ್ನು ಆಚರಿಸುವುದರಿಂದ ಕಲಿಯುಗದಲ್ಲಿ ದಾನ ಮಾತ್ರದಿಂದ ಮೋಕ್ಷವನ್ನು ಪಡೆಯಲು

ಸಾಧ್ಯ. ದಾನವೆಂಬುದು ಕಾಲಾಂತರದಲ್ಲಿ ಶೋಷಣೆಯ ಹಾಗೂ ವೆಚ್ಚದ ಕಾರ್ಯವಾಗಿ ಮಾರ್ಪಟ್ಟಿತು. ಪುರೋಹಿತಶಾಹಿಗಳು ಪ್ರಭಲರಾದಂತೆ ಅವರ ದಬ್ಬಾಳಿಕೆ, ಸಮಯದ ಅಭಾವದಿಂದ ಮಾನವನು ದಾನ ಮಾಡುವುದರಲ್ಲಿಯೇ ತನ್ನ ಆತ್ಮತೃಪ್ತಿಯನ್ನು ಪಡೆದುಕೊಳ್ಳುತ್ತಿದ್ದನು. ಇಂತಹ ದಾನದ ಮಹತ್ವವನ್ನು ಮುಂಬರುವ ಪೀಳಿಗೆಯವರಿಗೆ ತಿಳಿಸುವ ಸಲುವಾಗಿಯೇ ಕೊಡಮಾಡಿದ ದಾನ, ದಾನ ಮಾಡಿದ ಸಂದರ್ಭ, ದಾನದ ಫಲ, ದಾನ ಕೆಡಿಸಿದರೆ ಅದರಿಂದಾಗುವ ಪಾಪ ಮುಂತಾದ ವಿಷಯಗಳನ್ನೊಳಗೊಂಡ ಶಾಸನಗಳನ್ನು ಲಭ್ಯವಾಗಿವೆ. ಶಾಪಾಶಯಗಳನ್ನು ಹಾಕುವ ಉದ್ದೇಶ ತನ್ನ ಹೆಸರು ಶಾಸ್ವತವಾಗಿರಲಿ ಎಂದಲ್ಲಾ ಕೊಟ್ಟ ದಾನಗಳು ಹಾಳಾಗದಿರಲಿ ಎಂಬ ಭಾವನೆಯಿಂದ ಎಂಬುದಕ್ಕಾಗಿ. ಶಾಸನವೊಂದರಲ್ಲಿ "ತಲೆ ಹೋದರೂ, ನೆಲವನ್ನು ಈ ಧರೆಯನ್ನಾಳುವ ಅರಸ ಹೋದರೂ ಈ ಧರ್ಮದಲ್ಲಿ ಒಂದು ಅಡಿಕೆ ಒಂದು ಎಲೆಯನ್ನಾದರೂ ಬೇಡಲಾಗದು"**(ಇ.ಆಯ್.15.ಪುಟ–27)** ಎಂಬುದನ್ನು ಹೇಳುತ್ತದೆ. ಪ್ರಾಚೀನ ಶಾಸನಗಳು ಇಂತಹ ಶಾಪಾಶಯಗಳನ್ನು ಹೊಂದಿರುವುದಿಲ್ಲ ಆದರೆ ಆರನೆಯ ಶತಮಾನದಿಂದ ಶಾಪಾಶಯಗಳನ್ನು ಬರೆಸುವ ಪದ್ಧತಿ ಆರಂಭವಾಯಿತು ಎಂದು ಡಾ.ಎಸ್.ಕೆ.ದೀಕ್ಷಿತ್ ಹೇಳಿದ್ದಾರೆ.**(An Introduction to Archaeology, p-86)** ಆದರೆ ಹಲ್ಮಿಡಿ ಶಾಸನದಲ್ಲಿರುವ "ಕದೊನ್ ಮಹಾಪಾತಕನ್" ಎಂಬುದರ ಆಧಾರದ ಮೇಲೆ ಎಂ.ಚಿದಾನಂದಮೂರ್ತಿಯವರು ದೀಕ್ಷಿತ ಅವರ ಮಾತನ್ನು ಅಲ್ಲಗಳೆದಿದ್ದಾರೆ.ಅನಂತರದ ಶಾಸನಗಳಲ್ಲಿರುವ 'ಅರೆವೋನ್ ಪಂಚಮಹಾಪಾತಕನಕುಂ ಏಳಿನಿಯಾ ನರಕದಾಪುಮಿ ಅಕುಂ' **(I.A.X.p-60 578 A.D)** ಎಂಬ ಉಲ್ಲೇಖವನ್ನು ಸಾಕ್ಷೀಕರಿಸಿದ್ದಾರೆ.

ಡಾ.ಎಸ್.ಶೆಟ್ಟರ್ ಅವರು ಬಾದಾಮಿ ಚಾಲುಕ್ಯಾಧಿಪತಿಯಾದ ಒಂದನೆಯ ಕೀರ್ತಿವರ್ಮನ ಕಾಲದಲ್ಲಿ ಹೊರಡಿಸಲಾದ ಕ್ರಿ.ಶ.567 ರ ಆಡೂರಿನ ಶಾಸನದಲ್ಲಿ ಹಾಗೂ ಶಿರಸಿ ಬಳಿಯ ಪುರ್ದುಕಾನಿನ ಕದಂಬ ದೊರೆಯಾದ ಅಜವರ್ಮನ ಶಾಸನಗಳಲ್ಲಿ ಕಂಡುಬರುವ ಶುಭಸಂದೇಶಗಳನ್ನು ಸಾರುವ ಸ್ತುತಿಗಳನ್ನು ಗುರುತಿಸಿದ್ದಾರೆ.**(ಶೆಟ್ಟರ್ ಎಸ. ಮೊ.ಸ.ಕ.ಶಾ.9, 13)** ದಾನಸಂರಕ್ಷಣೆಯೇ ಧರ್ಮವೆಂದು ತಿಳಿಸುವುದರೊಂದಿಗೆ ಸ್ವಯಂ ದಾನವನ್ನು ಕೊಡದಿದ್ದರೂ ಸಹ ಬೇರೆಯವರು ಕೊಡಮಾಡಿದ ದಾನವನ್ನು ಗೌರವಿಸವ ಮತ್ತು ಸಂರಕ್ಷಿಸುವವರಿಗೂ ಪುಣ್ಯದೊರಕುವುದಲ್ಲದೇ ಅವನ ಪಾದಗಳು ದಾನಿಯ ಅಥವಾ ದಾನಕ್ಕೆ ಪಾತ್ರನಾದವನ ತಲೆಯ ಮೇಲಿಟ್ಟುಕೊಳ್ಳುವಷ್ಟು ಪವಿತ್ರವೆಂದು ಈ ಶುಭೋಕ್ತಿಗಳು ಸಾರಿಹೇಳುತ್ತವೆ.

"ಶೃದ್ಧಯಾ ದೇಯಂ ಅಶ್ರದ್ಧಯಾ ದೇಯ ಶ್ರೀಯಾ ದೇಯಂ ಹ್ರಿಯಾ ದೇಯಂ ಸಂವಿದಾ ದೇಯಂ' ಅಂದರೆ ದಾನ ಕೊಡುವವನು ಶೃದ್ದೆಯಿಂದ, ಆನಂದದಿಂದ, ವಿನಯದಿಂದ, ಭಯದಿಂದ, ಕರುಣೆಯಿಂದ ಕೊಡಬೇಕು ಅಂದಾಗ ಆ ದಾನವು ಸಾರ್ಥಕವೆನಿಸಿಕೊಳ್ಳುವುದು. **(ತೃತ್ತರೀಯ ಉಪನಿಷತ್ತು (1.11)**

**ದಾನಗಳ ಪ್ರಕಾರಗಳು :**

ದಾನಗಳಲ್ಲಿ ಮುಖ್ಯವಾಗಿ 16 ಪ್ರಕಾರಗಳು ಅವುಗಳನ್ನು ಶೋಡಷ ದಾನಗಳೆಂದು ಕರೆಯುತ್ತಿದ್ದರು. ಪ್ರಾಚೀನ ಕೃತಿಗಳಾದ ಮತ್ಸ್ಯಪುರಾಣ, ವಾಯುಪುರಾಣ, ಅಗ್ನಿಪುರಾಣ, ಲಿಂಗಪುರಾಣಗಳು ಹೇಮಾದ್ರಿಯ ವೃತ್ತಖಂಡ ಮುಂತಾದ ಕೃತಿಗಳು ಈ ಶೋಡಶ ದಾನಗಳನ್ನು ಪರಿಚಯಿಸುತ್ತವೆ.

| | | | |
|---|---|---|---|
| 1. ತುಲಾಪುರುಷ ದಾನ | 2. ಹಿರಣ್ಯಗರ್ಭದಾನ | 3. ಬ್ರಹ್ಮಾಂಡದಾನ | 4. ಕಲ್ಪವೃಕ್ಷದಾನ |
| 5. ಗೋಸಹಸ್ರದಾನ | 6. ಹಿರಣ್ಯ ಕಾಮಧೇನು | 7. ಹಿರಣ್ಯ ಅಶ್ವದಾನ | 8. ಹಿರಣ್ಯಾಶ್ವರಥ ದಾನ |
| 9. ಹೇಮಹಸ್ತಿರಥ ದಾನ | 10. ಪಂಚಲಾಗಲದಾನ | 11. ಭೂದಾನ | 12. ವಿಶ್ವಚಕ್ರದಾನ |
| 13. ಕಲ್ಪಲತಾ ದಾನ | 14. ಸಪ್ತಸಾಗರ ದಾನ | 15. ರತ್ನಧೇನು ದಾನ | 16. ಪಂಚಭೂತಘಟ ದಾನ |

ಕರ್ನಾಟಕದಲ್ಲಿ ಆಳಿಹೋದ ರಾಷ್ಟ್ರಕೂಟ ಅರಸರ ಕಾಲದಿಂದ ಹೊಯ್ಸಳರ ಅಂತ್ಯಾವಧಿಯವರೆಗಿನ ಶಾಸನಗಳನ್ನು ಗಮನಿಸಿದಾಗ ಮೇಲೆ ಉಲ್ಲೇಖಿತವಾಗಿರುವ ದಾನಗಳಲ್ಲಿ ಹೆಚ್ಚಾಗಿ ದಾಖಲಾಗಿರುವ ದಾನಗಳೆಂದರೆ ಭೂದಾನ ಮತ್ತು ಕೆಲವು ಶಾಸನಗಳಲ್ಲಿ ಕನ್ಯಾದಾನದ ಉಲ್ಲೇಖಗಳೂ ಕಾಣಸಿಗುತ್ತವೆ.

**ಪರೋಕ್ಷದಾನ :**

ಮೃತನಾದ ವ್ಯಕ್ತಿಯು ತನ್ನ ಜೀವಿತದ ಅವಧಿಯಲ್ಲಿ ಸಂಪಾದಿಸಿದ ಯಶಸ್ಸು, ಪ್ರತಿಷ್ಠೆ, ಹೆಸರು ಸಾವಿನ ನಂತರವೂ ಇರಬೇಕು ಎಂಬ ಉದ್ದೇಶದಿಂದ ಹಾಗೂ ಬದುಕಿದ್ದಾಗ ಪಡೆದುಕೊಂಡಿದ್ದ ಗೌರವವು ಪರೋಕ್ಷದಲ್ಲಿಯೂ ದೊರೆಯಲೆಂಬ ಹಾರೈಕೆಯಿಂದ ಮಾಡುತ್ತಿದ್ದ ಸ್ಮರಣಾರ್ಹವಾದ ಕಾರ್ಯವೇ ಪರೋಕ್ಷದಾನ.

**ದಾನದ ಮುಖ್ಯ ಪ್ರೇರಣೆಗಳು :**

1. ಧರ್ಮಮಾರ್ಗ ಅನುಸರಣೆ ಹಾಗೂ ಮೋಕ್ಷದ ಹಂಬಲಕ್ಕಾಗಿ ದಾನ.
2. ಸ್ವಧರ್ಮ ಸಂರಕ್ಷಣೆ ಹಾಗೂ ಸದ್ಗತಿಗೋಸ್ಕರ.
3. ಗಳಿಸಿದ ಸಂಪತ್ತಿನ ಸದುಪಯೋಗವಾಲೆಂದು.

**ದಾನದ ಸಂದರ್ಭಗಳು :**

1. ಸೂರ್ಯಗ್ರಹಣ, ಚಂದ್ರಗ್ರಹಣ, ಸಂಕ್ರಾಂತಿಯ ಸಂದರ್ಭಗಳಲ್ಲಿ.
2. ತೀರ್ಥಯಾತ್ರೆಗೆ ಹೋಗುವ ಸಂದರ್ಭದಲ್ಲಿ.
3. ಪಟ್ಟಾಭಿಷೇಕ ಸಮಾರಂಭ ಮತ್ತು ವಿಜಯೋತ್ಸವದ ಸಂದರ್ಭದಲ್ಲಿ.

**ಉದ್ದೇಶಗಳು**

1. ತಂದೆ–ತಾಯಿ, ಸಹೋದರ–ಸಹೋದರಿಯರು, ಮಕ್ಕಳು ಮತ್ತು ಸ್ವಯಂ ಪುಣ್ಯ, ಯಶಸ್ಸು ಪಡೆಯುವುದಕ್ಕಾಗಿ.
2. ದೇವಾಲಯಗಳ ಜೀರ್ಣೋದ್ಧಾರ, ಅಂಗಭೋಗ, ರಂಗಭೋಗ, ನೈವೇದ್ಯ, ದೀಪ, ಧೂಪ, ಗಂಧ, ಚೈತ್ರ–ಪವಿತ್ರ, ಪರ್ವಗಳ ವೆಚ್ಚಕ್ಕಾಗಿ.
3. ಸಂತಾನಪ್ರಾಪ್ತಿ, ತಪೋಧನರು, ಆಚಾರ್ಯರು ಅಧ್ಯಯನ, ಅಧ್ಯಾಪನ, ಆಹಾರಕ್ಕೆಂದು.

ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಲಭ್ಯವಾದ ಶಾಸನೋಕ್ತ ಧರ್ಮಗಳ ಕುರಿತಾದ ಅಧ್ಯಯನ ಮಾಡಿದಾಗ ಹೆಚ್ಚು ಶಾಸನಗಳು ಶೈವಧರ್ಮಕ್ಕೆ ಸಂಬಂಧಿಸಿದ್ದಾಗಿವೆ. ಈ ಶೈವಧರ್ಮದ ಬೆಳವಣಿಗೆಗೆ ಪ್ರೇರಣ ಶಕ್ತಿಯಾಗಿ ನಿಂತವರು ಅರಸರು, ರಾಣಿಯರು, ಸಾಮಂತರು, ಅಧಿಕಾರಿಗಳು, ಸಾಮಾನ್ಯ ಸ್ತ್ರೀಯರು, ವ್ಯಾಪಾರಿಗಳು, ವ್ಯಾಪಾರಿ ಸಂಘದವರು, ಮುನಿಗಳು ತಮ್ಮ ತಮ್ಮ ಶಕ್ತಿಗನುಗುಣವಾಗಿ ವಿವಿಧ ವಸ್ತುಗಳನ್ನು ದಾನವಾಗಿ ನೀಡುವುದರ ಮೂಲಕ ಶೈವಧರ್ಮವನ್ನು ರಕ್ಷಿಸಿದರು.

**ಶೈವಧರ್ಮದ ಬೆಳವಣಿಗೆಗೆ ಮಹಾಜನರ ದಾನ ದತ್ತಿಗಳು**

ಅಗ್ರಹಾರಗಳಲ್ಲಿ ವಾಸವಾಗಿದ್ದು ಆ ಅಗ್ರಹಾರಗಳ ಉಳಿವು ಮತ್ತು ಬೆಳವಣಿಗೆಯ ಜವಾಬ್ದಾರಿ ಇವರದಾಗಿರುತ್ತದೆ. ಸಾಮಾನ್ಯವಾಗಿ ಇಲ್ಲಿರುವ ಮಹಾಜನರೆಲ್ಲಾ ಬ್ರಾಹ್ಮಣರೇ ಆಗಿರುತ್ತಾರೆ. ಮಹಾಜನರು ವೇದ ವೇದಾಂಗಗಳಲ್ಲಿ ಪ್ರಾವಿಣ್ಯತೆಯನ್ನು ಪಡೆದಿರುವುದರಿಂದ ಸಮಾಜದಲ್ಲಿ ಅತ್ಯುನ್ನತ ಸ್ಥಾನವನ್ನು ಪಡೆದುಕೊಂಡಿದ್ದರು. ಇವರು ದೇವಾಲಯಗಳಲ್ಲಿ ಮೇಲ್ವಿಚಾರಣೆಯನ್ನು ನೋಡಿಕೊಂಡು ಹೋಗುವುದರ ಜೊತೆಗೆ ವಿದ್ಯಾದಾನವನ್ನು ನೀಡುತ್ತಿದ್ದರು. ದೇವಾಲಯಗಳಿಗೆ ದಾನಗಳನ್ನು ನೀಡುವ ಸಂದರ್ಭದಲ್ಲಿ ಈ ಮಹಾಜನರು ಹಾಜರಾಗಿರುತ್ತಿದ್ದರು. ಕೆಲವು ಸಮಯದಲ್ಲಿ ಇವರೂ ದಾನಗಳನ್ನು ನೀಡಿದ ಉದಾಹರಣೆಗಳನ್ನು ಕಾಣಬಹುದಾಗಿದೆ. ಮಹಾಜನರು ವೈಷ್ಣವ ಧರ್ಮಾಧಕರಾಗಿದ್ದರೂ ಸಹ ಶೈವಧರ್ಮದ ದೇವಾಲಯಗಳಲ್ಲಿ ಮೇಲ್ವಿಚಾರಕರಾಗಿ ದಾನ ಸ್ವೀಕರಿಸುವುದರ ಜೊತೆಗೆ ಆ ಧರ್ಮದ ಬೆಳವಣಿಗೆಗಾಗಿ ದಾನ ನೀಡಿದ್ದನ್ನು ತಿಳಿಸುವ ಒಟ್ಟು 106 ಶಾಸನಗಳು ಲಭ್ಯವಾಗಿವೆ. ಶಾಸನಗಳಲ್ಲಿ ಕಲ್ಯಾಣದ ಚಾಲುಕ್ಯರ ಕಾಲದ ಮಹಾಜನರೇ ಹೆಚ್ಚು ದಾನಗಳನ್ನು ನೀಡಿದ್ದನ್ನು ಗುರುತಿಸಬಹುದಾಗಿದೆ. ಪ್ರಸ್ತುತ ಸಂಶೋಧನಾ ಲೇಖನದಲ್ಲಿ ಕ್ರಿ.ಶ.757 ರಿಂದ ಕ್ರಿ.ಶ.1336ರ ಕಾಲಮಾನವನ್ನು ಅನುಲಕ್ಷಿಸಿ ಮಹಾಜನರ ಶಾಸನೋಕ್ತ ದಾನಗಳ ಕುರಿತಾಗಿ ಚರ್ಚಿಸಲಾಗಿದೆ.

**ರಾಷ್ಟ್ರಕೂಟರ ಕಾಲದ ಮಹಾಜನರು ನೀಡಿದ ದಾನ:**

ಪ್ರಸ್ತುತ ಕಾಲಮಾನಕ್ಕೆ ಸಂಬಂಧಿಸಿದಂತೆ ಲಭ್ಯವಾದ 106 ಶಾಸನಗಳಲ್ಲಿ ರಾಷ್ಟ್ರಕೂಟರ ಕಾಲದ 02 ಶಾಸನಗಳು ಮಹಾಜನರು ನೀಡಿದ ದಾನಗಳ ಕುರಿತಾಗಿ ಹೇಳುತ್ತವೆ. ಕ್ರಿ.ಶ. 787 ರ ಕಾಲದ ಶಿಗ್ಗಾವಿಯ **(ರಾಷ್ಟ್ರಕೂಟರ ಶಾಸನಗಳು ಸಂ.1.ನಂ.108, EI Vol.VI.p-98)** ಶಾಸನವು ಆದಿತ್ಯಭಟ್ಟಾರರ ಸ್ಥಾನವನ್ನು ರಕ್ಷಿಸಲು ಸಮರ್ಥರಾದ ಗೋಕರ್ಣಪಂಡಿತರಿಗೆ ಎಟಪ್ಪಾಳುಸೆಯ ನಾಲ್ಕು ಜನ ಮಹಾಜನರು ಚತುಸ್ಸೀಮೆಯನ್ನು ಅಳೆದು

80 *80 ಪ್ರಮಾಣದ ಗದ್ದೆಯ 3 ತೋಟದ ನೆಲವನ್ನು ದಾನ ನೀಡಿದರು. ಈ ಸ್ಥಾನವನ್ನು ಆಳುವ ಗೊರವರು ಖಂಡಿತವಾಗಿಯೂ ಬ್ರಹ್ಮಚಾರಿಗಳಾಗಿರಬೇಕೆಂದು ಇಲ್ಲವಾದರೆ ಸ್ಥಾನವಂಚಿತರಾಗುತ್ತಿದ್ದರೆಂದು ಉಲ್ಲೇಖಿಸಿದೆ.

ಬಳ್ಳಾರಿ ಜಿಲ್ಲೆಯ ಕುಡುತಿನಿಯ (**ರಾಷ್ಟ್ರಕೂಟರ ಶಾಸನಗಳು ಸಂ.2.ನಂ.297, SII Vol.IX.Pt.I.65; AR 53 of 1904; KUES Vol.I.Blr.39.p-53)** ಶಾಸನದ ಪ್ರಕಾರ ಕುರುಗೋಡದ ಮಹಾಜನರು ದೇಕಮ್ಮನ ದೇವಾಲಯಕ್ಕೆ 62 ಮತ್ತರು ಭೂಮಿಯನ್ನು ದಾನವಾಗಿ ಕೊಟ್ಟದ್ದನ್ನು ಬೇರೊಬ್ಬನು ಅಪಹರಿಸಲು ಗಡ್ಡದ ರುದ್ರರಾಶಿ ಭಟಾರರು ಚಕ್ರವರ್ತಿಯಿಂದ ಕೇಳಿ ದಾನವನ್ನು ಮರಳಿ ಪಡೆದುಕೊಂಡರು. ಪಂಚಮಹಾಶಬ್ದ ವ್ರತ ಜಪನಿಯಮ ಹೋಮಸಂಯುಕ್ತ ಸ್ವಾಮಿ ಕಾರ್ತಿಕೇಯನ ತಪೋವನಾಧಿಪತಿಯಾದ ಲೋಕಯ್ಯಗಾವುಂಡನು ಇದೇ ದೇವರಿಗೆ ಗಾನವನ್ನು ನೀಡಿದನು.

**ಕಲ್ಯಾಣದ ಚಾಲುಕ್ಯರ ಕಾಲದ ಮಹಾಜನರು ನೀಡಿದ ದಾನ:**

ಕಲ್ಯಾಣದ ಚಾಲುಕ್ಯರ ಕಾಲದಲ್ಲಿ ಹೊರಡಿಸಲಾದ 47 ಶಾಸನಗಳಲ್ಲಿ ಮಹಾಜನರು ನೀಡಿದ ದಾನದ ಕುರಿತಾದ ವಿಷಯಗಳನ್ನು ಪಡೆಯಬಹುದಾಗಿದೆ. ಇವರ ಮೊದಲನೆಯ ಶಾಸನವು ದೊರೆಯುವುದು ಕ್ರಿ.ಶ. 1057 ರ ಹಿರೇಹಡಗಲಿ**(ಕ.ವಿ.ವಿ.ಶಾ.ಸಂ.1.ನಂ.52)**ಯ ಶಾಸನದಲ್ಲಿ. ಈ ಶಾಸನವು ಪ್ರಕಾರ 120 ಜನ ಮಹಾಜನರು ಹಡಗಲಿಯ ದೇಮೇಶ್ವರ ದೇವರ ಸೇವೆಗೆಂದು ಎಣ್ಣೆ ಹಾಗೂ ಕೆಲವು ಆದಾಯಗಳನ್ನು ದಾನವಾಗಿ ನೀಡಿದರು ಎಂದು ತಿಳಿಸುತ್ತದೆ. ಲಕ್ಕುಂಡಿಯ **(ಲಕ್ಕುಂಡಿಯ ಶಾಸನಗಳು ನಂ.7)** ದವಣಿಗ ಮಹಾಜನರು ಜಿನ್ನೇಶ್ವರ ದೇವಾಲಯಕ್ಕೆ ಭತ್ತ ಮತ್ತು ಹಣ, ಬಾಗಳಿಯ **(ಕ.ವಿ.ವಿ.ಶಾ.ಸಂ.1.ನಂ.179)** ನೀಲೇಶ್ವರ ದೇವರ ಪೂಜೆಗಾಗಿ ಪ್ರತಿ ತಿಂಗಳು ಕೆರೆಯ ಸುಂಕದಲ್ಲಿ 1 ಹಣವನ್ನು ಮಹಾಜನರು ನೀಡಿದರು. ಮುದನೂರಿನ **(ಸುರಪುರ ತಾಲೂಕಿನ ಶಾಸನಗಳು.ನಂ.65)** ಮಹಾಜನರು ರಾಮೇಶ್ವರ ದೇವಾಲಯಕ್ಕೆ ಭೂಮಿಯೊಂದಿಗೆ ಹಣವನ್ನು, ಕುಳಗೇರಿಯ **(ಕಲಬುರ್ಗಿ ಜಿಲ್ಲೆಯ ಶಾಸನಗಳು.ನಂ.16)** ಮಹಾಜನರು ರುದ್ರೇಶ್ವರ ದೇವಾಲಯಕ್ಕೆ ಗ್ರಾಮವನ್ನು, ಆಲೂರಿನ **(SII.XI.No.136)** ತ್ರೈಪುರುಷ ದೇವಾಲಯಕ್ಕೆ ಮನೆ ನಿವೇಶನವನ್ನು, ನಾಗಾಯಿಯ **(ಕಲಬುರ್ಗಿ ಜಿಲ್ಲೆಯ ಶಾಸನಗಳುನಂ.16)** ಮಹಾಜನರು ಲಕ್ಷ್ಮಣೇಶ್ವರ ದೇವಾಲಯಕ್ಕೆ ಹಣವನ್ನು, ಕುರುವತ್ತಿಯ **(ಕ.ವಿ.ವಿ.ಶಾ.ಸಂ.1.ನಂ.1)** ಮಹಾಜನರು ಅಭಿನವ ಸೋಮೇಶ್ವರ ದೇವಾಲಯಕ್ಕೆ ಭೂಮಿಯೊಂದಿಗೆ ತೆರಿಗೆಯನ್ನು ದಾನವಾಗಿ ನೀಡಿದರು. ಕುಕನೂರಿನ **(ಕ.ವಿ.ವಿ.ಶಾ.ಸಂ.2.ನಂ.38)** ಮಹಾಜನ–1000 ಇವರು ಮೂಲಸ್ಥಾನ ದೇವಾಲಯಕ್ಕೆ ನಂದಾದೀವಿಗೆಗೆ ಗಾಣ ದಾನ ಮಾಡಿದರು. ಯಳವತ್ತಿಯ **(ARIE.15.No.64)** 120 ಮಹಾಜನರು ಗುಂಡೇಶ್ವರ ದೇವಾಲಯಕ್ಕೆ ಭೂಮಿ, ಮನೆ, ಗಾಣವನ್ನು ದಾನವಾಗಿ ನೀಡಿದರು. ಕುಮಟಗಿಯ **(ಕ.ವಿ.ವಿ.ಶಾ.ಸಂ.10.ನಂ.64)** ಮಹಾಜನರು ಚನ್ನಬ್ರಹ್ಮೇಶ್ವರ ದೇವಾಲಯಕ್ಕೆ ಭೂಮಿಯೊಂದಿಗೆ ನಿವೇಶನವನ್ನು ನೀಡಿದರೆ, ಬೆಳಗಾವಿಯ**(KI.No.2.No.30)**ಈಶ್ವರ ದೇವಾಲಯಕ್ಕೆ ಹಣ, ಕುರಹಟ್ಟಿಯ**(SII.XV.No.95)** ಶಂಕರದೇವರ ದೇವಾಲಯಕ್ಕೆ ಎಣ್ಣೆಯನ್ನು ದಾನ ಮಾಡಿದರು ಉಳಿದಂತೆ ಒಟ್ಟು 37 ಶಾಸನಗಳಲ್ಲಿ ಕೇವಲ ಭೂಮಿಯನ್ನು ದಾನವಾಗಿ ನೀಡಿದ್ದನ್ನು ಗುರುತಿಸುತ್ತವೆ.

**ಕಲ್ಯಾಣದ ಕಳಚೂರಿ ಅರಸರ ಕಾಲದ ಮಹಾಜನರು ನೀಡಿದ ದಾನ:**

ಕಲಚೂರಿಗಳ ಕಾಲದ 12 ಶಾಸನಗಳು ಮಹಾಜನರು ನೀಡಿದ ದಾನದ ಕುರಿತಾದ ವಿಷಯಗಳನ್ನು ತಿಳಿಸುತ್ತವೆ. ಹಣದ ಉಲ್ಲೇಖವಿರುವ 5 ಶಾಸನಗಳು, ನಿವೇಶನ 3, ಮನೆ 2, ಭೂಮಿ 5, ತೆರಿಗೆ 2 ಶಾಸನಗಳು ಉಲೇಖಿಸುತ್ತವೆ. ಜಂಬೂದ್ವೀಪದ ಶಿರೋಮಣಿ ಸರ್ವನಮಸ್ಯದ ಹಿರಿಯ ಅಗ್ರಹಾರ ಜಂಬುಖಂಡಿಯ ಶ್ರೀಮದ್ ಆಶೇಷ ಮಹಾಜನಂಗಳು ಸಿರಿವೊಳಲು ಪೊರಗಣ ಶ್ರೀ ನಾಗೇಶ್ವರ ದೇವರಿಗೆ ನಿವೇಶನ, ತೆರಿಗೆಗಳನ್ನು ದಾನವಾಗಿ ನೀಡಿದರು ಎಂದು ಶಿರೋಳದ **(Vyasanga Taranga No.10, ಜಿ.ಕೆ.ದೇವರಾಜಸ್ವಾಮಿ. ಕಳಚೂರಿ ಶಾಸನಗಳು.ನಂ.19)** ಕ್ರಿ.ಶ.1134 ರ ಶಾಸನದಿಂದ ತಿಳಿಯುವುದು.

ಕ್ರಿ.ಶ.1172 ರ ತುಂಗಳದ **(BK No.70 of 1938-39, SII Vol.IX Jamakandi No.33, ಜಿ.ಕೆ.ದೇವರಾಜಸ್ವಾಮಿ. ಕಳಚೂರಿ ಶಾಸನಗಳು.ನಂ205)** ಶಾಸನವು ಆಶೇಷ ಮಹಾಜನಗಳು ದೇವರ ಧೂಪದೀಪ, ನೈವೇದ್ಯಕ್ಕೆ ಭೂದಾನ ಮಾಡಿದರು. ತೆಲ್ಲಂಗದ **(KI Vol.VI No.21 of 1940-41,** ಕ್ರಿ.ಶ.1147 ರ ಶಾಸನದ ಪ್ರಕಾರ ತೆಲ್ಲಂಗದ ಅಗ್ರಹಾರದ ಮಹಾಜನಗಳೆರಡನೂರ ಸ್ವಾಮಿಗಳು ಸೆಟ್ಟಿಗಳು, ಬಣಜಿಗರೊಂದಿಗೆ ಸೇರಿಕೊಂಡು ದೇವಾಲಯದ ಸತ್ರಕ್ಕೆ ಭತ್ತವನ್ನು ದಾನಬಿಟ್ಟರು. ಯಳವತ್ತಿ **(AR No.B-217 of 1953-54, ಜಿ.ಕೆ.ದೇವರಾಜಸ್ವಾಮಿ. ಕಳಚೂರಿ**

**ಶಾಸನಗಳು.ನಂ.49)** ಕ್ರಿ.ಶ.1158 ರ ಶಾಸನವು ಶ್ರೀನಾಗಲಿಂಗೇಶ್ವರ ದೇವರ ಆಚಾರ್ಯರಾದ ದೇವರಾಶಿ ಪಂಡಿತರ ಪಾದಪೂಜೆ ಮಾಡಿ ದೇವಾಲಯಕ್ಕೆ ಭೂಮಿ ಮತ್ತು ನಿವೇಶನವನ್ನು ದಾನವಾಗಿ ಬಿಟ್ಟರು.

ಲಕ್ಷ್ಮೇಶ್ವರದ **(ID No.21 2006 Pg.82-83, ಜಿ.ಕೆ.ದೇವರಾಜಸ್ವಾಮಿ. ಕಳಚೂರಿ ಶಾಸನಗಳು.ನಂ.266)** ಕ್ರಿ.ಶ.1177 ರ ಶಾಸನವು ಸುತ್ತಲಿನ ಗ್ರಾಮಗಳ ಗಾವುಂಡರ ಜೊತೆಗೂಡಿ ಮಹಾಜನರು ಸ್ವಯಂಭೂ ದಕ್ಷಣ ಸೋಮನಾಥ ದೇವರ ಪಂಚ ಉತ್ಸವಗಳ ಸಂದರ್ಭದಲ್ಲಿ ಮಾಡುವ ಅಂಗಭೋಗ, ರಂಗಭೋಗಕ್ಕೆಂದು ಪುಲಿಗೇರಿ ನಾಡಿನ ಗ್ರಾಮಗಳ ಒಂದೊಂದು ಗದ್ಯಾಣವನ್ನು ಸಂಗ್ರಹಿಸಿ ದೇವಾಲಯದ ಪೂಜಾಕಾರ್ಯಗಳಿಗೆ ನೀಡಿದರು ಎಂದು ತಿಳಿಸುತ್ತದೆ. ಮುಳಗುಂದದ ಮಹಾಜನರು **(SII Vol.XV No.131 Mulagundanadu Pg.64)** ವಿದಿರೇಶ್ವರ ದೇವಾಲಯಕ್ಕೆ ಮಹಾಜನರು ಪಂಚಮಠಸ್ಥಾನದ ಐನೂರ್ವರೊಂದಿಗೆ ಜೊತೆಯಾಗಿ ಶ್ರೀ ವಿದಿರೇಶ್ವರದ ಆಚಾರ್ಯ ವಾಮಶಕ್ತಿ ಪಂಡಿತದೇವರ ಪಾದಪೂಜೆ ಮಾಡಿ ನಾಲ್ಕು ಮತ್ತರು ಭೂಮಿ ಮತ್ತು ತೋಟವನ್ನು ದಾನವಾಗಿ ನೀಡಿದರು.

ಕಲಬುರ್ಗಿ ಜಿಲ್ಲೆಯ ಕೆಲ್ಲೂರಿನ **(ಜಿ.ಕೆ.ದೇವರಾಜಸ್ವಾಮಿ. ಕಳಚೂರಿ ಶಾಸನಗಳು. ನಂ.249)** ಮಂತ್ರಶಕ್ತಿ, ಕ್ರಿಯಾಶಕ್ತಿ, ಇಚ್ಛಾಶಕ್ತಿ, ಶಾಪಾನುಗ್ರಹ ಸಮರ್ಥರು ಎಲ್ಲಾ ಮಹಾಜನರು ಬ್ರಾಹ್ಮಣ, ಕ್ಷತ್ರಿಯ, ಸೂದ್ರಾದಿವರ್ಗದವರು ಸೇರಿಕೊಂಡು ಸಿದ್ಧಸಾತೇಶ್ವರ ದೇವರ ದೇವಕಾರ್ಯಕ್ಕೆ ಉತ್ತರಾಯಣ ಸಂಕ್ರಮಣದ ಸಂದರ್ಭದಲ್ಲಿ ಆಚಾರ್ಯರಾದ ಚಿಲ್ಲೆಯನ ಪಾದಪೂಜೆ ಮಾಡಿ 3 ಮತ್ತರು ಗದ್ದೆ, ರಾಜಹಸ್ತದ ಅಗಲ 26 ನೀಳದ ನಿವೇಶನವನ್ನು ದಾನವಾಗಿ ಬಿಟ್ಟರು. ರಾಯಚೂರು ಜಿಲ್ಲೆಯ ಗೊಬ್ಬೂರಿನ **(HKI No.83, ಜಿ.ಕೆ.ದೇವರಾಜಸ್ವಾಮಿ. ಕಳಚೂರಿ ಶಾಸನಗಳು. ನಂ.254)** ಆಶೇಷ ಮಹಾಜನರು ವಸಂತ ಕಲಿದೇವರ ನಂದಾದೀವಿಗೆಗೆಂದು ಗಾಣದ ಎಣ್ಣೆಯನ್ನು ಮತ್ತು 600 ಮತ್ತರು ಭೂಮಿಯನ್ನು ದಾನ ನೀಡಿದರು.

ಬಳಗಾನೂರಿನ **(AR No.B-259 of 1954-55, ಜಿ.ಕೆ.ದೇವರಾಜಸ್ವಾಮಿ. ಕಳಚೂರಿ ಶಾಸನಗಳು.ನಂ.348)** ಮಹಾಜನರು ಮೂಲಸ್ಥಾನ ಅಮೃತಲಿಂಗ, ನಕರೇಶ್ವರ ಹಾಗೂ ಚನ್ನಕೇಶವ ದೇವರಿಗಾಗಿ, ಮದುವೆ ಕಾಣಿಕೆಯಾಗಿ ಒಂದು ಹಣವನ್ನು, ಸೀಮಂತಕ್ಕೆ ಒಂದು ಹಣ, ಪುತ್ರೋತ್ಸವವಾದಲ್ಲಿ ಒಂದು ಹಣ, ಮಗುವಿಗೆ ಮೀಯಿಸುವಾಗ ಎರಡು ಹಾಗದ ಲೆಕ್ಕದಲ್ಲಿ ದಾನ ನೀಡಿದರು.

ಕವಲೂರಿನ **(KUES Vol.II Koppal No.03)** ಆಶೇಷ ಮಹಾಜನ ಐನೂರ್ವರು ಹರಿಹರ ದೇವರ ಸನ್ನಿದನದಲ್ಲಿ ಸಂಕಮದೇವನ ಐದನೆಯ ವರ್ಷದಲ್ಲಿ ಅಂದರೆ ಕ್ರಿ.ಶ.1178 ರ ಅವಧಿಯಲ್ಲಿ ಹರಿಹರದೇವರ ಬ್ರಹ್ಮಪುರಿಗೆ, ಸೂಳೆಗೇರಿಗೆ ಯೆಡೆಹಳ್ಳಿಗೇರಿಯ ಹೊಲಮನ್ನೆಯವನ್ನು ತಮ್ಮ ಸಂತಾನಾಭಿವೃದ್ಧಿ ಬಯಸಿ ಕೊಟ್ಟರು.

ಅಳವಂಡಿಯ **(KUES Vol.II Koppala No.09,** ನಾಲ್ನೂರು ಮಹಾಜನರು ತಮಗೆ ತಂಬುಲಕ್ಕಾಗಿ 14 ಗದ್ಯಾಣ ಹಾಗೂ ಎರಡು ಮನೆಗಳನ್ನು ಮಲ್ಲಿಕಾರ್ಜುನ ಭೊವನಿಗೆ ದಾನವಾಗಿ ನೀಡಿದರು.

ಹಗರಟಗಿಯ **(ಜಿ.ಕೆ.ದೇವರಾಜಸ್ವಾಮಿ. ಕಳಚೂರಿ ಶಾಸನಗಳು.ನಂ.173,** ಮಹಾಜನರು ವರ್ತಕರೊಂದಿಗೆ ಜೊತೆಯಾಗಿ ಎರರಡೈನೂರ್ವರ ಸಮ್ಮುಖದಲ್ಲಿ ಸೋಮೇಶ್ವರ ಫೈಸರು, ಚಾಕಲದೇವಿ, ಮಲ್ಲದೇವರಸರಿಂದ 20ಮತ್ತರು ಭೂಮಿಯನ್ನು ಕೊಂಡು ತ್ರಿಕೂಟೇಶ್ವರ ಮತ್ತು ಭೈರವ ಮತ್ತು ಗವರೇಶ್ವರ ದೇವರ ಅಂಗಭೋಗ, ನೈವೇದ್ಯಗಳಿಗಾಗಿ ಸೂರ್ಯರಾಶಿ ಪಂಡಿತರ ಕಾಲ್ತೊಳೆದು ದತ್ತಿ ಬಿಟ್ಟರು.

**ಯಾದವ ಅರಸರ ಕಾಲದ ಮಹಾಜನರು ನೀಡಿದ ದಾನ:**

ದೇವಗಿರಿಯ ಯಾದವ ಅರಸರ ಕಾಲದ 16 ಶಾಸನಗಳಲ್ಲಿ ಮಹಾಜನರ ದಾನಗಳ ಉಲ್ಲೇಖಗಳಿವೆ. ಅದರಲ್ಲಿ ಮೊದಲನೆಯದು ಭೈರವಾಡಗಿಯ **(ಕ.ವಿ.ವಿ. ಶಾ.ಸಂ X. No.39, SII XV. 152, B.K. 108 of 1930-31)** ಕ್ರಿ.ಶ.1191 ರ ಶಾಸನವಾಗಿದ್ದು ಶಿವಸ್ತುತಿಯಿಂದ ಆರಂಭವಾಗಿದ್ದು ಏಳಾಪುರದ ಮಹಾಜನರು ಹಾಗೂ ಬೌದ್ಧವಾಡಿಗೆಯ ಮಾಚರಸನ ಹೆಂಡತಿ ಮಾಳಿಯಕ್ಕ ತನ್ನ ಪಾಲಿಗೆ ಬಂದಿರುವ ಭೂಮಿಯನ್ನು ದಾನವಾಗಿ ಬಿಟ್ಟ ವಿವರವಿದೆ.

ಮುತ್ತಗಿ **(ಕ.ವಿ.ವಿ. ಶಾ.ಸಂ X. No.39, SII XV. 152, B.K. 108 of 1930-31)** ಗ್ರಾಮದಲ್ಲಿರುವ ಕ್ರಿ.ಶ. 1192 ರ ಶಾಸನವು ಶ್ರೀತೀಕೇಶ್ವರ ದೇವರ ಪವಿತ್ರಾರೋಹಣದ ಸಂದರ್ಭದಲ್ಲಿ ಆಗಮಿಸಿದ 300 ಮಹಾಜನರು ದೇವಕಾರ್ಯಗಳನ್ನು ಮೆಚ್ಚಿಕೊಂಡು ತೋಟದ ಬಣ್ಣಿಗೆದೆರೆಯನ್ನು ದಾನವಾಗಿ ನೀಡಿದ್ದನ್ನು ತಿಳಿಸುವುದು. ಬಾಗೇವಾಡಿ ಅಗ್ರಹಾರದ ಆಶೇಷ ಮಹಾಜನರು ದಂಡನಾಯಕ ಮಧುವರಸ ಮತ್ತು

ಮುದ್ರಹಸ್ತದ ನಾರಗಸರ ಸಮ್ಮುಖದಲ್ಲಿ ನಾರಾಯಣದೇವನ ಕೈಯಿಂದ ಹಣವನ್ನು ಪಡೆದು ಬೊಂತೇಶ್ವರ ದೇವರಿಗೆ ಮಠದ ಆಚಾರ್ಯ ದೇವರಾಶಿ ಪಂಡಿತರಿಗೆ ನೀಡಲಾಯಿತು.

ಜಮಖಂಡಿಯ **(ಕ.ವಿ.ವಿ. ಶಾ.ಸಂ IX. No. 17, SII XX. 212)** ಮಹಾಜನರು ಮಹಾಸಭೆಯನ್ನು ನಡೆಸಿ ನಂತರ ಭಟ್ಟೋಪಾಧ್ಯಾಯರಿಗೆ ಶ್ರೀಕಾರ್ಯಕ್ಕೆಂದು ಗಾಣವೊಂದನ್ನು ದಾನ ನೀಡಿದರೆಂದು ಅಲ್ಲಿಯ ಶಾಸನವು ತಿಳಿಸುವುದು. ಗದುಗಿನ ಕ್ರಿ.ಶ. 1213ರ ಶಾಸನದ ಪ್ರಕಾರ **(Inscriptions of Yadavas. p-118-120, BK.No.9 of 1926-27)** ಮಹಾಜನರು ಸಿದ್ಧಾಂಶಿವ ಅಖಂಡಿತ ಬ್ರಹ್ಮಚರ್ಯವಿಸತ್ಯವಾಕ್ಯಾಪರನಾಮಾನಾ... ಕಾಳರಾಶಿ ಪಂಡಿತ ಶೀಷ್ಯ ತ್ರಿಕೂಟೇಶ್ವರದೇವರಿಗೆ ಆ ಸ್ಥಾನದ ಆಚಾರ್ಯ ಶ್ರೀಮತ್ ಸಿದ್ಧಾಂತ ಕ್ರಿಯಾಶಕ್ತಿ ಪಂಡಿತದೇವರ ಕೈಯಲ್ಲಿ 528 ಗದ್ಯಾಣ ಹೊನ್ನು ಸುವರ್ಣ ಪೂಜೆಗಾಗಿ ಕೊಂಡು ಅವರ ಪಾದ ಪ್ರಕ್ಷಾಳನ ಧಾರಾಪೂರ್ವಕವಾಗಿ ಮಾಡಿ ಬಿಟ್ಟ ದಾನ. ಹಾಗೂ 30 ಮತ್ತರು ಭೂಮಿ, ಒಂದು ಹಿರಿಯ ಮನೆ, ಹೂದೋಟ, ದೇವರ ವೀಳೆಯಕ್ಕೆ ಒಂದು ಎಲೆಯಡಕೆ ತೋಟ ಗೋಪ್ರಚಾರವಾಗಿ ಕೊಟ್ಟರು. ಶಾಸನದಲ್ಲಿ ಶಿಷ್ಯಜನ ದಯಾಳುತಯಾ ಲಕುಳೀಶ ಏವ್ಯ ಎಂಬ ಉಲ್ಲೇಖ.

ಯಳ್ವಾರದ **(Inscriptions of Yadavas. Vol.II.p-15-17, SII XV. No.166; BK No.38 of 1930-31)** ಮಹಾಜನರು ಮಹಾಪ್ರಧಾನ ಮಲ್ಲಿದೇವ ದಂಡನಾಯಕನ ಜೊತೆಗೂಡಿ ತ್ರಿಭೋಗಾಭ್ಯಂತರವಾಗಿ ಯಳವಾರದ ಗಂಗೇಶ್ವರ ದೇವರ ಸತ್ರಕ್ಕೆ ದೇವರ ತ್ರಿಕಾಲಪೂಜೆ, ನೈವೇದ್ಯ, ಜೀರ್ಣೋದ್ಧಾರಕ್ಕೆ ಸರ್ವನಮಸ್ಯವಾಗಿ ಪಂಚಮಠದ ಸಮಸ್ತ ಪ್ರಜೆಗಳ ಸಮ್ಮುಖದಲ್ಲಿ ಬಿಟ್ಟ ದಾನ.

ಕೊಲ್ಹಾರದ **(Inscriptions of Yadavas. Vol.II.p-33-BK Ni.94 of 1920-21,SII XV.No.169)** ಶಾಸನವು ದಕ್ಷಿಣ ವಾರಣಾಸಿ ಕೊಲ್ಹಾರದ ಅಶೇಷ ಮಹಾಜನರು, ಪ್ರಭುಗಾವುಂಡರು ಅವರ ಮಕ್ಕಳು, ಶಿವಶಕ್ತಿಗುರುಗಳು ಸಮಸ್ತ ಕೊತ್ತಳಿಗಳು ಸೇರಿ ಪ್ರತಿಷ್ಠೆ ಮಾಡಿಸಿದ ಶ್ರೀ ಮಲ್ಲಿಕಾರ್ಜುನ ದೇವರ ಅಂಗಭೋಗ ಜೀರ್ಣೋದ್ಧಾರ, ಪೂಜೆಗಾಗಿ ಭೂಮಿ, ನೀಡಿದರೆಂದು ಹೇಳುತ್ತದೆ.

ಚಂಡಣಾಯಕ ಕೇತಗಾವುಂಡನ ಮಕ್ಕಳಾದ ರಾಮಗಾವುಂಡ, ಸಿಂಗಗಾವುಂಡರು ತಾವು ಪ್ರತಿಷ್ಠಾಪಿಸಿದ ರಾಮನಾಥದೇವರು, ಅಯನೂರ್ವೇಶ್ವರ ದೇವರು, ಬಾಚೇಶ್ವರದೇವರು, ಕೇತೇಶ್ವರದೇವರು, ಹಾಗೂ ಚೌಡೇಶ್ವರಿದೇವಿ ಐದು ದೇವರುಗಳ ನಂದಾದೀವಿಗೆ, ರಂಗಭೋಗ, ಜೀರ್ಣೋದ್ಧಾರ ನೈವೇದ್ಯ ಮಹಾಜನರು ದತ್ತಿ ಬಿಟ್ಟರು ಎಂದು ಹಗರಟಗಿಯ **(Inscriptions of Yadavas. Vol.II.p-78-80 ಸುರಪುರ ತಾಲೂಕಿನ ಶಾಸನಗಳು. ನಂ.90. ಪುಟ–189)** ಕ್ರಿ.ಶ. 1229 ರ ಶಾಸನವು ತಿಳಿಸುತ್ತದೆ.

ತಿಳವಳ್ಳಿಯ **(Inscriptions of Yadavas. Vol.II.p-130-146 ; KRI No.25 of 1945-46; KI Vol.V.No.42)** ಮಹಾಜನರು ಮೂಲಸ್ಥಾನ ಸಾವಂತೇಶ್ವರ ದೇವರಿಗೆ ಬೊಮ್ಮಿದೇವ, ಪ್ರಭುಗಾವುಂಡರೊಂದಿಗೆ ಸೇರಿಕೊಂಡು ಗ್ರಾಮವೊಂದನ್ನು ದಾನವಾಗಿ ಬಿಟ್ಟರು. ಕುಂದಗೋಳದ **(Inscriptions of Yadavas. Vol.II.p-164-166; BK No.78 of 1938-39; SII XX.No. 199)** ಮಹಾಜನರು ಕ್ರಿ.ಶ.1240 ರ ಅವಧಿಯಲ್ಲಿ ಮಹಾಜನರು ಮತ್ತು ಮಲ್ಲಶರ್ಮರು ದುರ್ಗಾದೇವಿಯ ನಂದಾದೀವಿಗೆ ನೈವೇದ್ಯ, ಅಂಗಭೋಗ, ರಂಗಭೋಗಕ್ಕೆಂದು ಭೂದಾನ ಮಾಡಿದರು. ನಾಗಾವಿಯ **(Inscriptions of Yadavas. Vol.II.p-205; BK No. 144 of 1933-34; SII XVIII No.223)** ಊರೊಡೆಯನೊಂದಿಗೆ ಜೊತೆಯಾಗಿ ಸಮಸ್ತ 104 ಮಹಾಜನರು ಕೋಡಿಯ ಮಹಾಬಳೇಶ್ವರ ದೇವರಿಗೆ ಅಂಗಭೋಗ, ರಂಗಭೋಗ, ಚೈತ್ರ ಪವಿತ್ರ ನಿಮಿತ್ತ ಉತ್ತರಾಯಣ ಸಂಕ್ರಮಣದ ಸಂದರ್ಭದಲ್ಲಿ ರಾಜಗುರು ಕೇದಾರದೇವರ ಕಾಲ್ತೊಳೆದು ತೋಟವನ್ನು ದಾನ ಬಿಟ್ಟರೆಂದು ಶಾಸನವು ದಾಖಲಿಸುತ್ತದೆ.

ಆಲಗುರದ **(Inscriptions of Yadavas. Vol.II.p-214; BK No. 47 of 1938-39. SII XX.No.204. ಕ.ವಿ.ವಿ.ಶಾ.ಸಂ. 9. ಜಮಖಂಡಿ–21)** ಮಹಾಜನರು, ಸಮಸ್ತ ಪ್ರಜೆಗಳು, ಮೂಲಿಗರು, ಒಕ್ಕಲರು ಸೇರಿ ಮಲ್ಲಿಕಾರ್ಜುನ ದೇವರಿಗೆ ಉಪ್ಪು, ಎಣ್ಣೆ, ಅಡಿಕೆ ಮುಂತಾದವುಗಳ ಮೇಲಿನ ಆದಾಯಗಳನ್ನು ಬಿಟ್ಟರೆಂದು ಕ್ರಿ.ಶ.1245ರ ಶಾಸನವು ತಿಳಿಸುತ್ತದೆ.

ಅಗ್ರಹಾರ ಇಂಗಳೇಶ್ವರದ **(ಕ.ವಿ.ವಿ. ಶಾ.ಸಂ X. No.12, SII XV. 196, B.K. 07 of 1930-31)** ಶಾಸನದ ಪ್ರಕಾರ ಇಂಗಳೇಶ್ವರದ 1000 ಮಹಾಜನರು ಗೋಪಿನಾಥ ದೇವರಿಗೆ ಭೂಮಿ ದಾನ. ದೇವಾಲಯದ ಬೀದಿಯಲ್ಲಿ ಒಂದು ಅಂಗಡಿ ದಾನ ಮಾಡಿದರು.

ಸಿಂಘಣದೇವನ ಕಾಲದಲ್ಲಿ ಮಗರಮುರಾರಿ ಸೋಯಿದೇವ ನಾಯಕರು, ಆಶೇಷ ಮಹಾಜನರು ಕೇಸರ್ಪಟ್ಟಿಯ ಕಲಿದೇವರಿಗೆ ಧೂಪದೀಪ ನೈವೇದ್ಯಕ್ಕೆ ಭೂಮಿ, ಹಣ ಮತ್ತು ಎಣ್ಣೆಯನ್ನು ದಾನವಾಗಿ ನೀಡಿದರು ಎಂದು ದೇವಗಾಂವದ **(Inscriptions of Yadavas. Vol.II.p-286;BK No. 19 of 1936-37; SII XX. No.206)** ಶಾಸನವು ತಿಳಿಸುತ್ತದೆ. ಶಿವಮೊಗ್ಗ ಜಿಲ್ಲೆಯ ಮಲ್ಲಾಪುರದ **(EC.Vol.VIII. Sorab-No.-247, p-101)** ಶಾಸನವು ಕುಪ್ಪಟ್ಟೂರಿನ ಆಶೇಷ ಮಹಾಜನರು ಶ್ರೀ ಮೂಲಸ್ಥಾನ ದೇವರಿಗೆ ಬಿಟ್ಟದಾನದ ಬಗ್ಗೆ ಪರಿಚಯಿಸುತ್ತದೆ.

ಮಹಾಜನರ ದಾನದ ಕುರಿತಾಗಿ ತಿಳಿಸುವ ಯಾದವರ ಕೊನೆಯ ಶಾಸನ ಕಲ್ಕೇರಿಯ ಕ್ರಿ.ಶ.1289ರ ಶಾಸನವು ಆಶೇಷ ಮಹಾಜನರು ಅಸುಂಡಿಯ ದೇವತೆಗೆ 12 ಮಹಾಜನರು ನೀಡಿದ ದಾನವನ್ನು ಪಂಚಮಠದದವರು ಸಲುವಬೇಕು ಎಂದು ತಿಳಿಸುತ್ತದೆ.

**ಹೊಯ್ಸಳ ಅರಸರ ಕಾಲದ ಮಹಾಜನರು ನೀಡಿದ ದಾನ:**

ಹೊಯ್ಸಳರ ಕಾಲದ 33 ಶಾಸನಗಳು ಅಂದು ಶೈವಧರ್ಮದ ಬೆಳವಣಿಗೆಗೆ ಮಹಾಜನರು ನೀಡಿದ ದಾನಗಳ ಕುರಿತಾಗಿ ಚರ್ಚಿಸಿವೆ. ಒಟ್ಟು ಶಾಸನಗಳಲ್ಲಿ 3 ಶಾಸನಗಳಲ್ಲಿ ಕೇವಲ ಭೂದಾನದ ಬಗ್ಗೆ ಉಳಿದ ಶಾಸನಗಳು ಭೂಮಿಯೊಂದಿಗೆ ಗಾಣ, ಗದ್ದೆ, ಹೂದೋಟ ಅಥವಾ ಇತರೆ ವಸ್ತುಗಳ ದಾನ ನೀಡಿರುವುದನ್ನು ಗುರುತಿಸುತ್ತವೆ. 8 ಶಾಸನಗಳು ಹಣದ ದಾನದ ಉಲ್ಲೇಖವನ್ನು ನೀಡುತ್ತವೆ. ಕೇವಲ ಎರಡು ಶಾಸನಗಳಲ್ಲಿ ಭೂಮಿಯೊಂದಿಗೆ ಗಾಣ ದಾನ ಮಾಡಿದ್ದನ್ನು ಸೂಚಿಸುತ್ತವೆ. ಚಿಕ್ಕಕಡಲೂರಿನ ಕ್ರಿ.ಶ.1130–31 ರ ಶಾಸನವು ಮಹಾಜನರು ನೀಡಿದ ದಾನದ ಉಲ್ಲೇಖವಿರುವ ಮೊದಲನೆಯ ಶಾಸನವಾಗಿದೆ. ಈ ಶಾಸನದ ಪ್ರಕಾರ ಶ್ರೀಗೋವಿಂದಪುರದ ಆಶೇಷ ಮಹಾಜನರು, ಬಾಸಗೌಡ, ಹರಿಯ ಕಡಲೂರಿನ **(EC-VIII. P-324-325)** ಬೊಮ್ಮಗೌಡ ಅಲ್ಲಿಯ ಶಿವಶಕ್ತಿ ಪಂಡಿತರ ಮಗ ಹೊನ್ನಜೀಯ ಈತನ ಮಗ ಹೊಲಜೀಯ ನಿರ್ಮಿಸಿದ ಶ್ರೀಕಲಿದೇವರ ದೇವಾಲಯಕ್ಕೆ ದಾನ ನೀಡಿದರು. ಕೆಲ್ಲಂಗೆರೆಯ **(Inscriptions of Hoysal Vol.I.No. 145. P-248-249, 149 [V. AK. 110] EC-X. P-192-194)** .ಮಹಾಜನರು ತೆಲ್ಲಿಗ ಜಕ್ಕವ್ವೆಯು ದೇವಾಲಯದ ನಿರ್ಮಿಸಿದ ಶಿವಾಲಯದ ಜೀರ್ಣೋದ್ದಾರಕ್ಕಾಗಿ ನಂದಾದೀವಿಗೆಗೆ, ನೈವೇದ್ಯಕ್ಕೆ ಆಶೇಷ ಮಹಾಜನರು ಈಶಾನ್ಯಶಕ್ತಿ ಪಂಡಿತರ ಶಿಷ್ಯ ದೇವರಾಶಿ ಪಂಡಿತರ ಕಾಲು ತೊಳೆದು ಭೂದಾನ ನೀಡಿದ ವಿವರ. ದೇವಾಲಯದ ಕೆಲಸಗಾರರಾದ ಹಾನೋಜ, ಮಾನೋಜ, ಚಂಗೋಜ, ಉಲ್ಲೇಖಗಳಿವೆ.

ಕೋಡಿಹಳ್ಳಿಯ **(Inscriptions of Hoysala vol-II.252, P.73,174(V AK. 145) EC-X P-226-227)** ಮಹಾಜನರು ದ್ವಿಜಗುರು ದೇವತಾಪೂಜಾತ ಅಗ್ರಹಾರ ತಳಲೂರ ಮಹಾಜನರು ಮಲಗೌಡರ ಜೊತೆಗೂಡಿ ಈಶ್ವರ ಸಂವತ್ಸರದ ಉತ್ತರಾಯಣ ಸಂಕ್ರಮಣದಂದು ಸೆಳುಗರಜೀಯನ ಮಗ ಮಹಾದೇವ ಪಂಡಿತರಿಗೆ ಮತ್ತು ಶ್ರೀಮಲ್ಲಿಕಾರ್ಜುನ ದೇವರ ರಂಗಭೋಗ, ನೈವೇದ್ಯ, ನಂದಾದೀವಿಗೆಗೆ ಊರ ಮುಂದಿನ ಕೆರೆಯಲ್ಲಿ 10ಕೊಳಗ, ದೋರಸಮುದ್ರದಲ್ಲಿ 2 ಕೊಳಗ ಗದ್ದೆ, ಬೆಲ್ಲಕೆರೆಯ ಮೂಡಗೋಡಿಯಲ್ಲಿ ಒಣಭೂಮಿ, ಅರೇಶ್ವರದೇವರಿಗೆ ದೋರಸಮುದ್ರದಲ್ಲಿ 40 ಕಂಭ ಒಣಭೂಮಿ, ಪಶ್ಚಿಮದ ಕೋಡಿಯಲ್ಲಿ 300 ಕಂಭ ಭೂಮಿ. ಈ ದತ್ತಿಯನ್ನು ತಳಿಲೂರ ಮಹಾಜನಗಳ ಪುತ್ರ ಬೋಕಗೌಡನು ಕಾಪಾಡಬೇಕು ಎಂಬ ಶಾಸನೋಕ್ತ ಉಲ್ಲೇಖವಿದೆ. ಸಿಂಧಘಟ್ಟದ **(Inscriptions of Hoysala Vol. III. Part I. No.417.P-129-130. 86)** ಮಹಾಜನರು ದೇವಣ್ಣ, ಮಾದಣ್ಣರ ಜೊತೆಗೂಡಿ ಮೂಲಸ್ಥಾನ ದೇವರ ಪೂಜಾ ಕಾರ್ಯಗಳಿಗೆ ಭೂಮಿಯೊಂದಿಗೆ ಕೆಲವು ತೆರಿಗೆಗಳನ್ನು, ಮನೆಯ ನಿವೇಶನವನ್ನು ದಾನವಾಗಿ ಬಿಟ್ಟರೆಂದು ಕ್ರಿ.ಶ.1179 ರ ಶಾಸನವು ಉಲ್ಲೇಖಿಸುತ್ತದೆ.

ಬೆಳ್ಳೂರಿನ **(EC-VII. P-60-65)** 96 ಮಹಾಜನರು ದೇವಾಲಯದ ಪೂಜಾ ಕಾರ್ಯಗಳಿಗೆಂದು ಗದ್ಯಾಣ ಮತ್ತು ಅಡಿಕೆಯನ್ನು ದಾನವಾಗಿ ನೀಡಿದರು. ಮಹಾಜನರ ದಾನದ ಕುರಿತು ತಿಳಿಸುವ ಕೊನೆಯ ಶಾಸನ ರಾಜನಶಿರೂರಿನ ಮಹಾಜನರು ನೀಡಿದ ದಾನದ ಶಾಸನವಾಗಿದೆ. ಈ ಶಾಸನದ ಪ್ರಕಾರ ರಾಜನಶಿರೂರಿನ ನಾಗಗೌಡನ ಮಗ ಹೆಗ್ಗಡೆ ನಾಗಣ್ಣ ಧರ್ಮೇಶ್ವರ ದೇವರಿಗೆ ನಂದೀಶ್ವರನನ್ನು ಮಾಡಿಸಿಕೊಟ್ಟು, ಮಹಾಜನರು ಮತ್ತು ಕಾಳಾಮುಖ ಯತಿ ರುದ್ರಶಕ್ತಿ ಪಂಡಿತರೊಂದಿಗೆ ಸೇರಿಕೊಂಡು ಧರ್ಮೇಶ್ವರ ದೇವರ ದೇವಾಲಯಕ್ಕೆ 12 ಗದ್ಯಾಣ ದಾನ ನೀಡಿದರು.

**ಮಹಾಜನರು ನೀಡಿದ ದಾನದ ಜಿಲ್ಲಾವಾರು ಸಂಖ್ಯಾ ಕೋಷ್ಟಕ**

| ಜಿಲ್ಲೆ | ರಾಷ್ಟ್ರಕೂಟ | ಕ.ಚಾಲುಕ್ಯ | ಕ. ಕಳಚೂರಿ | ಯಾದವರು | ಹೊಯ್ಸಳರು | ಒಟ್ಟು |
|---|---|---|---|---|---|---|
| ವಿಜಯಪುರ | | 3 | | 4 | | 7 |
| ಬಾಗಲಕೋಟೆ | | | 2 | 1 | | 3 |
| ಚಿಕ್ಕಮಗಳೂರ | | | | | 6 | 10 |
| ಬೆಳಗಾವಿ | | 1 | 1 | | | 2 |
| ಧಾರವಾಡ | | 2 | | 1 | | 3 |
| ಗದಗ | | 12 | 3 | 2 | | 17 |
| ರಾಯಚೂರ | | 5 | 1 | | | 6 |
| ಯಾದಗಿರಿ | | 5 | 1 | 1 | | 7 |
| ಕಲ್ಬುರ್ಗಿ | | 5 | 1 | 1 | | 7 |
| ಮಂಡ್ಯ | | | | | 4 | 6 |
| ಕೊಪ್ಪಳ | | 2 | 2 | | | 4 |
| ಡಾವಣಗೆರೆ | | 2 | | | | 2 |
| ಶಿವಮೊಗ್ಗ | | 1 | | 2 | | 3 |
| ಬಳ್ಳಾರಿ | 1 | 6 | | | | 7 |
| ಮೈಸೂರು | | | | | 2 | 3 |
| ಹಾವೇರಿ | 1 | 2 | | 1 | | 5 |
| ಹಾಸನ | | 2 | | | 21 | 16 |
| ಒಟ್ಟು | 2 | 48 | 11 | 13 | 33 | 106 |

**ಸಮಾರೋಪ :**

ಒಂದು ಧರ್ಮದ ಬೆಳವಣಿಗೆಗೆ ಯಾವುದೇ ಧರ್ಮ ಪಂತವನ್ನು ಲೆಕ್ಕಿಸದೇ ಸರ್ವರೂ ಒಂದೇ ಎಂಬ ಮನೋಭಾವದಿಂದ ಅಂದಿನ ಮಹಾಜನರು ತಾವು ಬ್ರಾಹ್ಮಣ್ಯವನ್ನು ಪಾಲಿಸುತ್ತಾ ವೈದಿಕ ಧರ್ಮದ ಬೆಳವಣಿಗೆಗೆ ಶ್ರಮಿಸುತ್ತಿದ್ದರೂ ಸಹ ಶೈವಧರ್ಮದ ಅಭ್ಯುದಯಕ್ಕೂ ಶ್ರಮಿಸಿರುವುದನ್ನು ಶಾಸನಗಳು ಸ್ಪಷ್ಟಪಡಿಸಿವೆ.

**ಆಕರ ಗ್ರಂಥಗಳು :**

ಕಲಬುರ್ಗಿ ಎಂ.ಎಂ 1975 ; ಧಾರವಾಡ ಜಿಲ್ಲೆ ಶಾಸನ ಸೂಚಿ,
ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ. ಧಾರವಾಡ

ಕಲಬುರ್ಗಿ ಎಂ.ಎಂ 1975 ; ಧಾರವಾಡ ತಾಲೂಕಿನ ಶಾಸನಗಳು
ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ. ಧಾರವಾಡ

ಕಲಬುರ್ಗಿ ಎಂ.ಎಂ 1976 ; ಬಿಜಾಪುರ ಜಿಲ್ಲೆಯ ಶಾಸನಸೂಚಿ
ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ. ಧಾರವಾಡ

| | | | |
|---|---|---|---|
| ಹಿರೇಮಠ ಬಿ.ಆರ್. ಮತ್ತು | 1976 | ; | ಬಿಜಾಪುರ ಜಿಲ್ಲೆಯ ಶಾಸನಸೂಚಿ ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ. ಧಾರವಾಡ |
| ಗೋಗಿ ಹನುಮಾಕ್ಷಿ (ಸಂ) | 1994 | : | ಮುದನೂರು ಮತ್ತು ಯಡ್ರಾವಿ ಶಾಸನಗಳು ಶಿವಚಂದ್ರ ಪ್ರಕಾಶನ, ಧಾರವಾಡ |
| ಗೋಗಿ ಹನುಮಾಕ್ಷಿ (ಸಂ) | 1994 | : | ಕಲ್ಬುರ್ಗಿ ಜಿಲ್ಲೆಯ ಶಾಸನಗಳು ಶಿವಚಂದ್ರ ಪ್ರಕಾಶನ, ಧಾರವಾಡ |
| ಗೋಗಿ ಹನುಮಾಕ್ಷಿ (ಸಂ) | 1994 | : | ಸುರಪುರ ತಾಲೂಕಿನ ಶಾಸನಗಳು ಸಾಹಿತ್ಯಿಕಾ ಪ್ರಕಾಶನ, ನವನಗರ, ಧಾರವಾಡ |
| ಗೋಗಿ ಹನುಮಾಕ್ಷಿ (ಸಂ) | 1994 | : | ಲಕ್ಕುಂಡಿಯ ಶಾಸನಗಳು ಮಹಿಳಾ ಸಾಹಿತ್ಯಿಕಾ ಪ್ರಕಾಶನ, ನವನಗರ, ಧಾರವಾಡ |
| ಜಿ.ಎಂ.ನಾಗಯ್ಯ (ಸಂ) | 2011 | ; | ಕಲ್ಯಾಣದ ಚಾಲುಕ್ಯರ ಶಾಸನಗಳು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ವಿ.ವಿ.ಮೈಸೂರು |
| ದೇವರಕೊಂಡಾರಡ್ಡಿ | 1976 | ; | ಕನ್ನಡ ವಿಶ್ವವಿದ್ಯಾಲಯದ ಶಾಸನ ಸಂಪುಟಗಳು. [1,2,7,9,10] ಬಳ್ಳಾರಿ, ಕೊಪ್ಪಳ, ರಾಯಚೂರ, ಬೀದರ, ಬಾಗಲಕೋಟೆ ಜಿಲ್ಲೆಗಳು |
| ದೇವರಾಜಸ್ವಾಮಿ ಜಿ.ಕೆ. | 2017 | ; | ಕಳಚೂರಿ ಶಾಸನಗಳು, ಯುವಸಾಧನೆ, ರಾಜರಾಜೇಶ್ವರಿ ನಗರ ಬೆಂಗಳೂರು. |
| ಶಿವಾನಂದ ವಿ. (ಸಂ) | 1978 | ; | ಕಲ್ಬುರ್ಗಿ ಜಿಲ್ಲೆಯ ಶಿಲಾಶಾಸನಗಳು ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ |
| ಕರ್ನಾಟಕ ರಾಜ್ಯ ಗ್ಯಾಸೆಟಿಯರ್‌ಗಳು: | | | ವಿಜಯಪುರ, ಧಾರವಾಡ, ಉಡುಪಿ, ಕೋಲಾರ, ತುಮಕೂರು, ಶಿವಮೊಗ್ಗ, ಗುಲಬರ್ಗಾ, ಕೊಡಗು, ಮಂಡ್ಯ ಜಿಲ್ಲೆಗಳು |
| ಎಪಿಗ್ರಾಫಿಕಾ ಕರ್ನಾಟಿಕ ಸಂಪುಟಗಳು | | : | III, IV, V, VI, VII, VIII, IX, X, XI, XII, XIII, XV, XXIV |